# SB ARTS AND KCP SCIENCE COLLEGE VIJAYPUR

## ASSIGNMENT

## ಯಮ - ನಚಿಕೇತನ ಸಂಭಾಷಣೆ -ಯ ಸಾರಾಂಶ:—

NAME : Kajal. k. Badaganv

STD : BA 6th Sem

SUB : Opt - Sanskrit

RCUB.NO : A2051768

ವಾಜಶ್ರವಸ್ಸ ಎನ್ನುವ ಋಷಿಯ ಮಗನು ಅರುಣಿ ಆ ಅರುಣಿಯ ಮಗ ಉದ್ದಾಲಕ ಈತನಿಗೆ ಶ್ವೇತಕೇತು ಮತ್ತು ನಚಿಕೇತ ಎನ್ನುವ ಇಬ್ಬರು ಪುತ್ರರಿದ್ದರು. ಒಮ್ಮೆ ಉದ್ದಾಲಕನು ಮಹಾಂತಯಜ್ಞವನ್ನು ಮಾಡುವಾಗ ಲೋಭದಿಂದ ಗೊಡ್ಡು ಹಸುಗಳನ್ನು ದಾನ ಮಾಡುತ್ತಿದ್ದ. ಇದರಿಂದ ನೊಂದ ನಚಿಕೇತ ನನ್ನನ್ನು. ಯಾರಿಗಾದರೂ ದಾನ ಮಾಡು ಎಂದು ಪದೇ ಪದೇ ಕೇಳಿದಾಗ ಮೃತ್ಯುವಿಗೆ ದಾನ ಮಾಡಿದ್ದೇನೆ ಎಂದನು. ಇದರಿಂದ ನಚಿಕೇತ ದೇಹ ತ್ಯಾಗ ಮಾಡಿ ಯಮಲೋಕಕ್ಕೆ ಹೋಗಿ ಅಲ್ಲಿ ಮೂರು ದಿನ ಆಹಾರ ಸೇವಿಸದೆ ಯಮನಿಗಾಗಿ ಈ ಮೂರು ದಿನ ಕಾದು ಮೂರು ವರಗಳನ್ನು ಪಡೆದನು.

ಮೂರು ದಿನ ಆಹಾರ ಸೇವಿಸದೆ ಯಮನಿಗಾಗಿ ಕಾದ ಅತಿಥಿಯನ್ನು ಕಾಯಿಸಿದ್ದಕ್ಕಾಗಿ ಯಮನು ನಚಿಕೇತನಿಗೆ ಮೂರು ವರವನ್ನು ಕೇಳು ಎಂದು ಹೇಳಿದ. ಯಮಲೋಕಕ್ಕೆ ಬಂದ ಮುಗ್ಧಬಾಲ ನಚಿಕೇತನನ್ನು ಯಮ ನಮಸ್ಕರಿಸಿ ಯೋಗಕ್ಷೇಮ ವಿಚಾರಿಸಿದ. ನಿನಗೇನು ಬೇಕು ಎಂದು ಕೇಳಿದ್ದಕ್ಕೆ ಸ್ವರ್ಗಲೋಕವನ್ನೊಮ್ಮೆ ನೋಡಬೇಕು ಎನ್ನುವ ತನ್ನ ಅಭಿಲಾಷೆಯನ್ನು ನಚಿಕೇತ ಯಮನ ಮುಂದಿಟ್ಟ. ಆತನ ಬಯಕೆಯನ್ನು ಪುರಸ್ಕರಿಸಿದ ಯಮ ಆತನನ್ನು ರಥದಲ್ಲಿ ಕುಳ್ಳಿರಿಸಿ ಸ್ವರ್ಗಲೋಕ ವೀಕ್ಷಣೆಗೆ ಕಳುಹಿಸಿಕೊಟ್ಟ. ಎಲ್ಲವನ್ನೂ ನೋಡಿ ಬಂದ ಮೇಲೆ ಯಮ ನಚಿಕೇತನಲ್ಲಿ ನಿನ್ನ ಆಯುಸ್ಸು ಇನ್ನೂ ಮುಗಿದಿಲ್ಲ. ತಂದೆಯ ಆಜ್ಞೆ ಪಾಲಿಸುವುದಕ್ಕೋಸ್ಕರ ಬಂದಿರುವ ನೀನು ಮರಳಿ ಹೋಗು ಎಂದು ಹೇಳಿ ಕಳುಹಿಸಿಕೊಟ್ಟಂತೆ ಮೂರು ದಿನ ಕಾಯುತ್ತಿದ್ದಕ್ಕಾಗಿ ನೀನು ಬಯಸಿದ ಮೂರು ವರವನ್ನು ಕೊಡುತ್ತೇನೆ ಏನು ಬೇಕಾದರು ಕೇಳು ಎನ್ನುತ್ತಾನೆ ಯಮ.

ನಚಿಕೇತ ಯಮನಲ್ಲಿ ಕೇಳಿದ ಮೊದಲ ವರ ನಾನು ಪುನಃ ನನ್ನ ತಂದೆಗೆ ಮಗನಾಗಿ ಅದೇ ದೇಹದಲ್ಲಿ ಹುಟ್ಟಬೇಕು.; ನನ್ನ ತಂದೆ ಸತ್ತು ಬದುಕಿದ ನನ್ನನ್ನು ಗುರುತಿಸಬೇಕು. ನನ್ನನ್ನು ನೋಡಿ ಸಂತೋಷಪಡಬೇಕು. ಒಳ್ಳೆಯ ಮಾತನ್ನಾಡಿ ಸ್ವಾಗತಿಸಬೇಕು. ನನ್ನ ತಂದೆಗೆ ಕೆಟ್ಟದ್ದನ್ನು ಮಾಡುವ ಬಯಕೆ ಎಂದೂ ಬರಬಾರದು. ಆತನ ಮನಸ್ಸು ಸದಾ ಒಳ್ಳೆಯ ಕೆಲಸ ಮಾಡಲು ಹಪಹಪಿಸಬೇಕು. ಮತ್ತು ಆತ ಎಂದೂ ಕೋಪ ಮಾಡಬಾರದು. ಎಂದು ನಚಿಕೇತ ಯಮನನ್ನು ಕೇಳುತ್ತಾನೆ. ಇದು ನಚಿಕೇತ ಕೇಳುವ ಮೊದಲ ವರ.

ನಚಿಕೇತ ಕೇಳಿದ ವರವನ್ನು ಯಮ ಪುರಸ್ಕರಿಸುತ್ತಾನೆ. ಮತ್ತೆ ಹೇಳುತ್ತಾನೆ ನೀನು ಹಿಂದಿರುಗಿ ಹೋದಾಗ ನಿನ್ನ ತಂದೆ ನಿನ್ನನ್ನು ಅಷ್ಟೇ ಸ್ಪಷ್ಟವಾಗಿ ಗುರುತಿಸುತ್ತಾನೆ ನಿನ್ನನ್ನು ಪ್ರೀತಿಯಿಂದ ಸ್ವಾಗತಿಸುತ್ತಾನೆ ಮರಳಿ ಹೋದ ನಿನ್ನನು ಕಂಡು ಮೇಲೆ ಆತನ ಕೋಪ ನಾಶವಾಗಿ ಆತ ಶಾಂತನಾಗುತ್ತಾನೆ ಮತ್ತು ಆತ ರಾತ್ರಿ ಸುಖನಿದ್ರೆಯನ್ನು ಪಡೆಯುತ್ತಾನೆ ಎಂದರು ನಚಿಕೇತ ಮುಂದುವರಿದು ಹೇಳುತ್ತಾನೆ ಮೋಕ್ಷದಲ್ಲಿ ಸಾವಿನ ಭಯವಿಲ್ಲ, ಅಲ್ಲಿ ಹುಟ್ಟು ಸಾವಿನ ನಡುವಿನ ತರಂಗಗಳಾದ ಶೋಕ ಮೋಹ, ಹಸಿವು, ಬಾಯಾರಿಕೆ, ಮುಪ್ಪು, ರೋಗ ಯಾವುದೂ ಇಲ್ಲದೇ ಎಲ್ಲರೂ ಆನಂದವಾಗಿರುತ್ತಾರೆ ಎಂದು ಕೇಳಿದ್ದೇನೆ ಸ್ವರ್ಗಲೋಕಕ್ಕೆ ಹೋಗಿ ಅಲ್ಲಿಂದ ಬೇರೊಂದಕ್ಕೆ ಹೋಗಬೇಕಾದರೆ ಸ್ವರ್ಗ ನಿಯಾಮಕನಾದ ಮತ್ತು ಅಗ್ನಿಸ್ವರೂಪದ ಭಗವಂತನನ್ನು ತಿಳಿದುಕೊಳ್ಳಬೇಕು

ಎನ್ನುವ ವಿಚಾರ ಗೊತ್ತಿದೆ ನೀನು ಮೋಕ್ಷ ಪ್ರಧಾನವಾದ ನಾರಾಯಣನನ್ನು ಉಪಾಸನೆ ಮಾಡಿದ್ದೀಯ. ಈ ಅಗ್ನಿಸ್ಥಾನದಲ್ಲಿ ಭಗವಂತನಾದ ನಾನು ಹೇಗೆ ಉಪಾಸನೆ ಮಾಡಬೇಕು. ಅದನ್ನು ಹೇಳು ನನಗೆ ಶ್ರದ್ಧೆ ಇದೆ ನಾನು ಶ್ರದ್ಧೆಯಿಂದ ಕೇಳುತ್ತಿದ್ದೇನೆ ಭಗವಂತನೆಂಬ ತತ್ತ್ವವನ್ನು ಉಪಾಸನೆ ಮಾಡಿ ಸ್ವರ್ಗವನ್ನು ಸೇರಿ ಅಲ್ಲಿ ಸ್ವಲ್ಪ ಕಾಲ ಇದ್ದು ಆಮೇಲೆ ವೈಕುಂಠವನ್ನು ಸೇರುತ್ತಾರೆ ಎನ್ನುವುದನ್ನು ತಿಳಿದವರು ಹೇಳುತ್ತಾರೆ ಮೋಕ್ಷ ಮೋಕ್ಷ ಸಾಧನೆಗಾಗಿ ಉಪಾಸನೆ ಮಾಡಬೇಕಾದ ಭಗವಂತನನ್ನು ಅಗ್ನಿಮುಖದಲ್ಲಿ ಏಕೆ ಉಪಾಸನೆ ಮಾಡಬೇಕು. ಮತ್ತು ಹೇಗೆ ಮಾಡಬೇಕು ಅಗ್ನಿಮುಖದಲ್ಲಿ ಆರಾಧನೆ ಮಾಡುವ ಅದರ ಹಿಂದಿನ ವಿಜ್ಞಾನ ಮತ್ತು ಉಪಾಸನೆಯ ರಹಸ್ಯವನ್ನು ನನಗೆ ಹೇಳು ಎಂದು ನಚಿಕೇತ ತನ್ನ ಎರಡನೇ ವರವನ್ನು ಯಮನ ಕೇಳುತ್ತಾನೆ.

ನಚಿಕೇತನ ಪ್ರಶ್ನೆಗೆ ಉತ್ತರಿಸುತ್ತಾ ಯಮ ಹೇಳುತ್ತಾನೆ ಎಲ್ಲಾ ವಿಚಾರವನ್ನು ಎಲ್ಲಾ ರಹಸ್ಯವನ್ನು ವಿವರಿಸಿ ಹೇಳುತ್ತೇನೆ ಅದನ್ನು ನನ್ನಿಂದ ಕೇಳು ಎಂದು ನಮಗೆ ತಿಳಿದಂತೆ ನಾವು ಮಾಡುವ ಕರ್ಮದ ಪಾಪ-ಪುಣ್ಯವನ್ನು ಲೆಕ್ಕ ಹಾಕಿ ಅದಕ್ಕನುಗುಣವಾದ ಫಲವಾದ ನಿರ್ಧರಿಸುವ ಯಮ. ಆದ್ದರಿಂದ ಕರ್ಮ ಮಾಡುವುದು ಹೇಗೆ ಅದರ ಹಿಂದಿನ ಅನುಸಂಧಾನ ಹೇಗಿರಬೇಕು ನಾವು ಮಾಡುವ ಕರ್ಮ ಮೋಕ್ಷಪ್ರದವಾಗಬೇಕಾದರೆ ಏನು ಮಾಡಬೇಕು ಇದನ್ನು ನಿಖರವಾಗಿ ಹೇಳಬಲ್ಲವ ಯಮ ಆದ್ದರಿಂದ ಅದನ್ನು ನನ್ನಿಂದ ನೇರವಾಗಿ ಕೇಳು ಎಂದಿದ್ದಾನೆ ಯಮ.

ಮುಂದುವರಿದು ಯಮ ಹೇಳುತ್ತಾನೆ ಈ ಅಗ್ನಿವಿದ್ಯೆಯನ್ನು ಯಾರು ತಿಳಿಯುತ್ತಾರೋ ಅವರಿಗೆ ಬರಿಯ ಸ್ವರ್ಗ ಪ್ರಾಪ್ತಿ ಮಾತ್ರವಲ್ಲ ಅನಂತ ಲೋಕ ಪ್ರಾಪ್ತಿಯಾಗುತ್ತದೆ ಅತ ಸಾವಿಲ್ಲದ ಮೋಕ್ಷವನ್ನು ಸೇರುತ್ತಾರೆ ಇಲ್ಲಿ ಯಮ ಹೇಳುತ್ತಾನೆ ಭಗವಂತ ನಮ್ಮ ಹೃದಯದ ಗುಹೆಯಲ್ಲಿ ಇದ್ದಾನೆ ಇಲ್ಲಿ ನಚಿಕೇತನಿಗೆ ಎಲ್ಲಾ ವಿವರವನ್ನೂ ಹೇಳುವುದಾಗಿ ಪ್ರತಿಜ್ಞೆ ಮಾಡಿದ್ದ ಯಮ ಮುಂದೇನು ಹೇಳಿದನು. ಯಮ ನಚಿಕೇತನ ಮುಖಾಂತರ ಭೂಮಿಯ ಪರಿಚಯಿಸಲ್ಪಟ್ಟ ಅಗ್ನಿ ನಾರಾಯಣನನ್ನು ಮೂರು ಕಡೆ ಉಪಾಸನೆ ಮಾಡುವವರು ಎಂದು ಹೇಳಿದನು

ಯಮ ನಚಿಕೇತನನ್ನು ಪರೀಕ್ಷಿಸುವ ರೀತಿ ತನ್ನಿಂದ ಪ್ರಶಂಸೆ ಜೊತೆಗೆ ಚಿನ್ನದ ಹಾರ ದೊರೆತಾಗ ನಚಿಕೇತ ಚಿನ್ನದ ಆತನಿಗೆ ಲಭಿಸುತ್ತಾನೆ. ಎಂದು ಯಮ ನಚಿಕೇತನನ್ನು ಪರೀಕ್ಷಿಸುತ್ತಿದ್ದಾನೆ ಇದಕ್ಕೆ ನಚಿಕೇತ ಹೇಳಿದಂತೆ ಭೂಮಿ ಮೇಲೆ ಆರಾಧನೆ ಮಾಡತಕ್ಕ ಅಗ್ನಿವಿದ್ಯೆಗೆ ನನ್ನ ಹೆಸರು ಬಂತೆಂದರೆ ನನ್ನ ಭಾಗ್ಯ ಆದರೆ ಬಂಗಾರದ ಸರ ನನಗೆ ಬೇಡ ಅದು ನಿಮ್ಮಲ್ಲೇ ಇರಲಿ ಎಂದು ಇದು ಜ್ಞಾನಿಗಳಲ್ಲಿರುವ ದೊಡ್ಡ ಗುಣ ಏಕೆಂದರೆ ಇಲ್ಲಿ ಯಮ ಕೊಟ್ಟಿದ್ದು ಸಂಸಾರ ಬಂಧದ ಸಂಕೋಲೆ ಎನ್ನುವ ಹಾರ ಆದ್ದರಿಂದ ಅದನ್ನು ಜ್ಞಾನಿಯಾದ ನಚಿಕೇತ ಸ್ವೀಕಾರ ಮಾಡಲಿಲ್ಲ. ಆಗ ಯಮ ನಚಿಕೇತನಲ್ಲಿ ಹೇಳುತ್ತಾನೆ ನಿನ್ನ ಹೆಸರು ವೈದಿಕ ಇತಿಹಾಸದಲ್ಲಿ ಅಜರಾಮರವಾಗಿ ಉಳಿಯುವಂತೆ ನಿನಗೆ ವರವನ್ನು ಕೊಟ್ಟಿದ್ದೇನೆ

ಮೂರನೇ ವರವಾಗಿ ನಚಿಕೇತ ಇಡೀ ಮನುಕುಲವನ್ನು ಯಾವಾಗಲೂ
ಕಾಡುತ್ತಿರುವ ಒಂದು ಜಟಿಲವಾದ ಪ್ರಶ್ನೆಯನ್ನು ಯಮನ ಮುಂದೆ
- ಇಡುತ್ತಾನೆ ಕೆಲವರು ಹೇಳುತ್ತಾರೆ ಸತ್ತ ಮೇಲೆ ಅಸ್ತಿತ್ವ ಇದೆ ಎಂದು
ಇನ್ನು ಕೆಲವರು ಇಲ್ಲ ಎಂದು ಇದರ ಕುರಿತು ಶಾಸ್ತ್ರಕ್ಕನುಗುಣವಾಗಿ
ನಿನ್ನಿಂದ ಕೇಳಿ ತಿಳಿದುಕೊಳ್ಳಬೇಕು. ಇದು ಮುಖ್ಯವಾದ ಅರ್ಥ ಆದರೆ
ಈ ರೀತಿ ಯಮ ಹೇಳುತ್ತಾನೆ ನೀನು ಕೇಳಿದ ವಿಚಾರ ದೇವತೆಗಳಿಗೂ
ಪೂರ್ಣವಾಗಿ ತಿಳಿದಿಲ್ಲ. ಈ ಬಗ್ಗೆ ದೇವಲೋಕದಲ್ಲಿ ನಿರಂತರ ಚರ್ಚೆ
ನಡೆದಿದೆ ಎಂದು ಇದನ್ನು ದೇವತೆಗಳು ಪೂರ್ಣವಾಗಿ ಗ್ರಹಿಸ-
- ಲಾರರು ಹೀಗಿರುವಾಗ ನೀನು ತಿಳಿಯುವುದು ಕಷ್ಟ ಹಾಗಾಗಿ ಈ
ವರವನ್ನು ಬಿಟ್ಟು ಬೇರೆ ಏನಾದರು ವರವನ್ನು ಕೇಳು ಎನ್ನುತ್ತಾನೆ
ಯಮ. ನನ್ನನ್ನು ಬಲವಂತ ಮಾಡಬೇಡ ನನಗಾಗಿ ಈ ಪ್ರಶ್ನೆಯ
- ನ್ನು ಬಿಟ್ಟುಬಿಡು ಬೇರೆ ಏನಾದರೂ ವರವನ್ನು ಕೇಳು ಎನ್ನುತ್ತಾನೆ
ಯಮ. ನನ್ನನು ಬಲವಂತ ಮಾಡಬೇಡ ನನಗಾಗಿ ಈ
ಪ್ರಶ್ನೆಯನ್ನು ಬಿಟ್ಟು ಬೇರೆ ಏನಾದರೂ ಕೇಳು ಎನ್ನುತ್ತಾನೆ
ನಚಿಕೇತ ತಾನು ಕೇಳಿದ ಈ ಮೂರನೇ
ವರಕ್ಕೆ ಸಮಾನಾದ ಬೇರೊಂದು ವರವೇ ಇಲ್ಲ ಎಂದು
ಹೇಳಿದಾಗ ಯಮ ಹೇಳುತ್ತಾನೆ. ಬೇಕಾದರೆ ಅನೇಕ
ವರವನ್ನು ಕೇಳು ಯಮ ದೀರ್ಘವಾದ ಆಯಸ್ಸನ್ನು ಪಡೆದ
ಮಕ್ಕಳು ಮೊಮ್ಮಕ್ಕಳು ಆದರೆ ಸಾವಿನ ಆಚೆ ಜೀವನವನ್ನು
ಭಗವಂತನ ಬಗ್ಗೆ ಹೇಳು ಎಂದು ಕೇಳಬೇಡ
ನಿಯಂತ್ರಿಸುವ
ಎಂದು ಯಮ ಚಿತ್ರವಾದ ಪ್ರಲೋಭನೆ ಒಡ್ಡುತ್ತಾನೆ
ಇಲ್ಲಿ ನಚಿಕೇತ ಕೊಟ್ಟ ಉತ್ತರ ರೋಚಕವಾದದ್ದು
ನೀನು ಏನನ್ನು ಕೊಡುತ್ತೇನೆ ಎಂದು
ನಚಿಕೇತ ಹೇಳುತ್ತಾನೆ
ಹೇಳಿದೆಯೋ ಅವೆಲ್ಲವು ನಶ್ವರ ನನಗೆ ಆಯಸ್ಸು ಭೋಗ
- ಪ್ರಶ್ನೆ ಯಾವುದು ನನಗೆ ಬೇಡ ನನ್ನ ಬಯಕೆಯನ್ನು
ಇದ್ಯಾವುದೂ ತಣಿಸದು
ನಚಿಕೇತನ ಆಧ್ಯಾತ್ಮ ನಿಷ್ಠೆ ತಿಳಿಯಬೇಕು
ಎನ್ನುವ ಛಲವನ್ನು ಕಂಡು ಯಮನಿಗೆ ಬಹಳ ಸಂತೋಷ
- ಆಯಿತು ಇಷ್ಟು ನಿಷ್ಠುರತೆಯಿಂದ ಕೇವಲ ಜ್ಞಾನಕ್ಕೋಸ್ಕರ
ಇನ್ನೇನು ಬೇಡ ಎನ್ನುವ ಇಂತಹ ವಿದ್ಯಾರ್ಥಿ
ಜ್ಞಾನ ಬೇಕು
- ಯನ್ನು ಕಂಡ ಯಮ ಬಹಳ ಸುಂದರವಾಗಿ ಆತ್ಮವಿದ್ಯೆಯನ್ನು
ನಚಿಕೇತನಿಗೆ ತಿಳಿಸಿದನು

# B.L.D.E.A'S
# SBA AND KCP SCIENCE COLLEGE VIJAYPUR

## ASSIGNMENT

NAME: Kajal. k. Badagano
STD: B.A FINAL Year
SUB: opt. Sanskrit
RCUB NO: A2057768

Guided by: Prof. A. K. Haridas Sir

## ಅಗ್ನಿ:

ಯಜ್ಞದಲ್ಲಿ ಅಗ್ರಸ್ಥಾನದಲ್ಲಿದ್ದುಕೊಂಡು ಪುರೋಹಿತನಾಗಿಯೂ ಮತ್ತು ಪ್ರತ್ಯಕ್ಷದೇವತಾರೂಪದಿಂದ ಇರುವವನಾಗಿಯೂ ಅಲ್ಲದೆ ಮುಖ್ಯಭಾಗವಹಿಸುವ ಬ್ರಹ್ಮ, ಹೋತೃ, ಅಧ್ವರ್ಯು, ಉದ್ಗಾತೃ ಎಂಬ ನಾಲ್ಕು ಜನ ಮುಖ್ಯ ಋತ್ವಿಜರಲ್ಲಿ ಹೋತೃ ಎಂಬ ಋತ್ವಿಜನಾಗಿಯೂ ಯಜ್ಞ ಮಾಡುವ ಯಜಮಾನನಿಗೆ ರತ್ನಾದಿ ಸಂಪತ್ತನ್ನು ಅನುಗ್ರಹಿಸುವವನಾಗಿಯೂ ಇರುವ ಅಗ್ನಿಯೆಂಬ ದೇವತೆಯನ್ನು ಸ್ತೋತ್ರ ಮಾಡುವೆನು.

* ನಾನು ಸ್ತೋತ್ರ ಮಾಡುವ ಈ ಅಗ್ನಿಯನ್ನು ಪುರಾತನ ಕಾಲದಲ್ಲಿ ಅನೇಕ ಮಹರ್ಷಿಗಳು ಸ್ತೋತ್ರ ಮಾಡಿರುವರು. ಈಗಿನ ಕಾಲದಲ್ಲಿಯೂ ನಾವು ಹಾಗೂ ನಮ್ಮಂತೆ ಇರುವ ಇತರ ಋಷಿಗಳು ಅಗ್ನಿಯನ್ನು ಸ್ತೋತ್ರ ಮಾಡುವೆವು. ಈ ರೀತಿ ಭೂತ ವರ್ತಮಾನಗಳ ಋಷಿಗಳಿಂದ ಸ್ತುತಿಸಲ್ಪಡಲು ಯೋಗ್ಯನಾದ ಅಗ್ನಿಯು ಈ ನಾವು ಮಾಡುತ್ತಿರುವ ಯಜ್ಞದಲ್ಲಿ ನಾವು ಆಹ್ವಾನ ಮಾಡುವ ದೇವತೆಗಳನ್ನು ಹವಿರ್ಭಾಗವನ್ನು ಸ್ವೀಕಾರ ಮಾಡುವುದಕ್ಕಾಗಿ ಇಲ್ಲಿಗೆ ಕರೆದುಕೊಂಡು ಬರಲಿ.

* ಹೋತೃವು ಅಗ್ನಿಯನ್ನು ಸ್ತುತಿಸಲಾಗಿ ಅಗ್ನಿಯು ಅದರಿಂದ ಪ್ರಸನ್ನನಾಗಿ ಯಜ್ಞಮಾಡುವ ಯಜಮಾನನಿಗೆ ಧನಾದಿ ಐಶ್ವರ್ಯವನ್ನೂ ಕೀರ್ತಿಯನ್ನೂ ಪಾತ್ರಶಾಲಿಗಳಾದ ಪುತ್ರರನ್ನೂ ಮತ್ತು ಸೇವಕರ ಪರಿವಾರ ಜನರನ್ನೂ ಕೊಡಲಿ.

* ಎಲೈ ಅಗ್ನಿಯೇ ನೀನು ಈ ಯಜ್ಞವೇದಿಕೆಯ ನಾಲ್ಕು ದಿಕ್ಕುಗಳಲ್ಲಿಯೂ ಆಹವನೀಯ, ಮಾರ್ಜಾಲೀಯ, ಗಾರ್ಹಪತ್ಯ, ಅಗ್ನೀಧ್ರೀಯವೆಂಬ ನಾಲ್ಕು ಅಗ್ನಿಗಳ ರೂಪದಲ್ಲಿದ್ದುಕೊಂಡು ಸುತ್ತಲೂ ಸಹ ಇದ್ದು ಯಜ್ಞವನ್ನು ಧ್ವಂಸ ಮಾಡುವ ರಾಕ್ಷಸಾದಿಗಳಿಂದ ರಕ್ಷಿಸುತ್ತಿರುತ್ತೀಯ.

* ನಾವು ಸ್ತೋತ್ರಮಾಡುತ್ತಿರುವ ಈ ಅಗ್ನಿಯೇ ಯಜ್ಞದಲ್ಲಿ ಹವಿರ್ಭಾಗವನ್ನು ಸ್ವೀಕರಿಸುವುದರಿಂದ ಇತರ ದೇವತೆಗಳನ್ನು ಕರೆದುಕೊಂಡು ಬರಲು ಶಕ್ತನು. ಯಜ್ಞವೇ ಮೊದಲಾದ ಕರ್ಮಗಳಲ್ಲಿ ಮಾಡಬೇಕಾದ ನಾನಾವಿಧ ಕಾರ್ಯಗಳಲ್ಲಿ ಚೆನ್ನಾಗಿ ತಿಳುವಳಿಕೆಯುಳ್ಳವನು. ಸತ್ಯಸ್ವರೂಪನು ಯಜಮಾನನಿಗೆ ಯಜ್ಞಫಲವನ್ನು ಕೊಟ್ಟೇ ಕೊಡುವನು.

* ನನಗೆ ಅಭಿಮುಖನಾಗಿ ಪ್ರಕಾಶಿಸುತ್ತಿರುವ ಹೇ ಅಗ್ನಿಯೇ, ಅಗ್ನಿಯಲ್ಲಿ ಹೋಮ ಮಾಡುವ ಯಜಮಾನನ ಪ್ರೀತ್ಯರ್ಥವಾಗಿ ನೀನು ಧನ, ಗೃಹ, ಪುತ್ರಾದಿ ಸಂತತಿ ಪಶು ಮೊದಲಾದ ವಸ್ತುಗಳನ್ನು ಕೊಡುವೆಯಷ್ಟೆ. ಈ ರೀತಿ ಕೊಡುವ ವಸ್ತುಗಳೆಲ್ಲವೂ ನಿನ್ನವೇ ಆಗಿರುವುವು.

* ಹೇ ಅಗ್ನಿಯೇ ಯಜ್ಞವನ್ನು ಮಾಡುತ್ತಿರುವ ನಾವು ಪ್ರತಿದಿವಸವೂ ರಾತ್ರಿ ಹಗಲೆನ್ನದೆ ಸದಾಕಾಲದಲ್ಲಿಯೂ ನಿನ್ನನ್ನು ನಮಸ್ಕಾರ ಮತ್ತು ಸ್ತೋತ್ರಾದಿಗಳಿಂದ ಪುನಃ ಪೂರ್ವಕವಾಗಿ ಸೇವಿಸುತ್ತಾ ನಿನ್ನ ಸಮೀಪಕ್ಕೆ ಬರುವೆವು.

* ತಂದೆಯು ಮಗನ ವಿಷಯದಲ್ಲಿ ಪುತ್ರವಾತ್ಸಲ್ಯದಿಂದ ಅವನಿಗೆ ಯಾವಾಗಲೂ ಸುಲಭವಾಗಿ ದೊರೆಯುವನಷ್ಟೇ ನೀನೂ ಹಾಗೆಯೇ ನಮಗೆಲ್ಲ ಸುಲಭವಾಗಿ ದೊರೆಯಬೇಕು. ನಾವು ಮಾಡುವ ಸ್ತೋತ್ರದಿಂದ ಸಂತುಷ್ಟನಾಗಿ ನಮಗೆ ಪ್ರಸನ್ನನಾಗಬೇಕು.

ಸಾರಾಂಶ:

ಆದಿಪುರುಷನು ಅಸಂಖ್ಯಾತವಾದ ಶಿರಸ್ಸುಗಳುಳ್ಳವನು ಅಸಂಖ್ಯಾತವಾದ ಕಣ್ಣುಗಳುಳ್ಳವನೂ ಮತ್ತು ಅಸಂಖ್ಯವಾದ ಪಾದಗಳನ್ನು ಹೊಂದಿರುವನು. ಈ ವಿರಾಟ ಪುರುಷನು ಬ್ರಹ್ಮಾಂಡರೂಪವಾದ ಭೂಮಿಯನ್ನು ಸಕಲದಿಕ್ಕುಗಳಿಂದಲೂ ಸುತ್ತುವರಿದು ಅದಕ್ಕಿಂತಲೂ ಹತ್ತು ಅಂಗುಲದಷ್ಟು ಅತಿಕ್ರಮಿಸಿಯೂ ಸ್ಥಿತನಾಗಿದ್ದಾನೆ

* ನಮಗೆ ಗೋಚರವಾಗುವ ಸಕಲ ಜಗತ್ತು ಎಂದರೆ ವರ್ತಮಾನಕಾಲದ ಸಕಲ ಜಗತ್ತೂ ಆದಿಪುರುಷನ ಅಂಶವೇ ಆಗಿದೆ ಹಿಂದೆ ಇದ್ದ ಜಗತ್ತು, ಮುಂದೆ ಸಂಭವಿಸುವುದೂ ಅವನೇ ಈಶ್ವರಾಂಶವಲ್ಲದೆ ಬೇರೆಯಲ್ಲ ಅವನು ಅಮೃತತ್ವಕ್ಕೆ ಒಡೆಯನು. ಪ್ರಾಣಿಗಳಿಗೆ ಭೋಗಸಾಧನವಾದ ಅನ್ನದಿಂದ ಅವನು ಬೆಳೆಯುವಂತೆ ಕಾಣುತ್ತಾನೆ ಆದರೆ ಅವನ ಸ್ವರೂಪವು ಗೋಚರಾತೀತವಾದುದು

* ಭೂತ ವರ್ತಮಾನ ಮತ್ತು ಭವಿಷ್ಯತ್ಕಾಲಗಳಾದ ಸಕಲ ಜಗತ್ತೂ ಈ ಆದಿಪುರುಷನ ಸಾಮರ್ಥ್ಯ ವಿಶೇಷವೇ ಆಗಿದೆ ಅಲ್ಲದೇ ಆತನು ಸಕಲ ಜಗತ್ತಿಗಿಂತ ಅಧಿಕನು ಸಕಲ ಭೂತಗಳೂ ಈ ಈಶ್ವರನ ಕಾಲುಭಾಗ ಮಾತ್ರ ಈ ಮಹಾಪುರುಷನ ಮುಕ್ಕಾಲುಪಾಲು ಗೋಚರಾತೀತವಾದುದು.

* ಇಂದ್ರಿಯ ಪ್ರತ್ಯಕ್ಷಕ್ಕೆ ಗೋಚರವಲ್ಲದ ಮುಕ್ಕಾಲು ಭಾಗವನ್ನು ಸ್ವಪ್ರಕಾಶವಾದ ಲೋಕದಲ್ಲಿ ಸ್ಥಾಪಿಸಿರುವ ಪುರುಷನು ಉತ್ಕೃಷ್ಟವಾದ ದಿವ್ಯಲೋಕದಲ್ಲಿ ಸಂಸಾರಾತೀತನಾಗಿ ಸ್ಥಾಪಿತನಾಗಿದ್ದಾನೆ ಈ ಆದಿಪುರುಷನ ನಾಲ್ಕನೆಯ ಒಂದು ಭಾಗವು ಮಾತ್ರ ಸಂಸಾರರೂಪದಲ್ಲಿ ಮತ್ತೆ ಮತ್ತೆ ಆವಿರ್ಭೂತವಾಗುತ್ತದೆ

* ಅನೇಕ ಪ್ರಕಾರಗಳಲ್ಲಿ ಕಾಣುವ ಬ್ರಹ್ಮಾಂಡವು ಮೊದಲು ಆದಿಪುರುಷನಿಂದ ಉತ್ಪನ್ನವಾಯಿತು. ಈ ವಿರಾಡ್ದೇಹವನ್ನು ಆಶ್ರಯಿಸಿ ದೇಹಾಭಿಮಾನಿಯಾದ ಪುರುಷನು ಕಾಣಿಸಿಕೊಂಡನು. ಚೇತನಾ ಅಚೇತನ ರೂಪದಲ್ಲಿ ಕಾಣಿಸಿಕೊಂಡ ಪುರುಷನು ತನಗಿಂತಲೂ ಬೇರೆಯಾದ ದೇವತೆಗಳನ್ನು ಧರಿಸಿದನು. ಆ ದೇವರು ಪುರುಷನ ಅಂಗಗಳಾದ ದೇವತೆಗಳು

* ಜಗತ್ಸೃಷ್ಟಿಯಾದ ನಂತರ ಪುರುಷ ಸಂಜ್ಞಕವಾದ ಹವಿಸ್ಸಿನಿಂದ ಯಜ್ಞವನ್ನು ನೆರವೇರಿಸಿದರು. ಯಜ್ಞಕ್ಕೆ ಸಾಧನಭೂತನೂ

* ಜಗತ್ ಸೃಷ್ಟಿಗಿಂತಲೂ ಮೊದಲೂ ಉತ್ಪನ್ನನೂ ಆದ ವಿರಾಟ ಪುರುಷನನ್ನು ದರ್ಭಾಸನದ ಮೇಲೆ ಸ್ಥಾಪಿಸಿ ಪ್ರೋಕ್ಷಣೆ ಮಾಡಿದರು.

* ಜಗದ್ವ್ಯಾಪಿಯಾದ ವಿರಾಟಪುರುಷನೇ ಆಹುತಿಯಾಗಿರುವ ಅಗ್ನಿಷ್ಟೋಮದಿಂದ ಮೊಸರು ಮಿಶ್ರವಾದ ತುಪ್ಪವು ಉತ್ಪನ್ನವಾಯಿತು. ಅನಂತರ ಪಕ್ಷಿಗಳನ್ನು ಅರಣ್ಯಕವಾದ ಮೃಗಗಳನ್ನು ಗ್ರಾಮವಾಸಿಗಳಾದ ಗವಾಶ್ವಾದಿಗಳನ್ನು ಪುರುಷನು ಉತ್ಪನ್ನ ಮಾಡಿದನು.

* ಸರ್ವಾತ್ಮವಾದ ವಿರಾಟಪುರುಷನನ್ನೇ ಆಹುತಿಯಾಗಿರುವ ಆ ಯಜ್ಞದಿಂದಲೇ ಋಗ್ವೇದವೂ, ಸಾಮವೂ ಉತ್ಪನ್ನವಾದುವು ಅದರಿಂದಲೇ ಗಾಯತ್ರಿ ಛಂದಸ್ಸುಗಳು ಜನಿಸಿದವು.

* ಈ ವಿರಾಟ್ಪುರುಷನನ್ನು ಯಜ್ಞಾಹುತಿರೂಪದಲ್ಲಿ ಅರ್ಪಿಸಲು ಸಂಕಲ್ಪಿಸಿದಾಗ ಈ ಪುರುಷನ ಮುಖದಿಂದ ಬ್ರಾಹ್ಮಣರೂ, ಬಾಹುಗಳಿಂದ ಕ್ಷತ್ರಿಯರೂ ಉತ್ಪನ್ನರಾದರು.

## ವೇದ : ಧರ್ಮ ಮತ್ತು ವೇದಸಾಹಿತ್ಯದ ಬಗ್ಗೆ ಕೆಲವು ಪ್ರಮುಖ ವಿಚಾರಗಳು

ವೇದ ಮತ್ತು ಭಾರತೀಯ ಧರ್ಮಕ್ಕೆ ಈ ಋಷಿಗಳೇ ಮೂಲಪುರುಷರು ಭಾರತೀಯ ಧರ್ಮಕ್ಕೆ ಜೀವನ ದಾಯಕರು ನಮ್ಮ ಸಂಸ್ಕೃತಿಯ ನಿರ್ಮಾತೃಗಳೇ ಇವರು. ನಮ್ಮ ದೇಶದ ಸಂಸ್ಕೃತಿ ಸರ್ವಶ್ರೇಷ್ಠವೆಂದು ಪ್ರಸಿದ್ಧಿಗೆ ಬರಲು ಈ ಋಷಿಗಳೇ ಕಾರಣರು. ಈಗಲೂ ಕೂಡ ಧರ್ಮಾಧರ್ಮ ವಿಷಯಗಳಲ್ಲಿ ಶಂಕೆ ಬಂದಾಗ ಇವರ ಆಶ್ರಯವನ್ನು ಪಡೆಯುವೆವು. ಪ್ರಾಪಂಚಿಕವಾದ ಮತ್ತು ದುಃಖಪೂರಿತವಾದ ಸಂಸಾರದಲ್ಲಿ ಶಾಂತಿಯನ್ನು ಪಡೆಯಬೇಕಾದರೆ ಈ ಋಷಿಗಳ ಜೀವನ ಚರಿತ್ರವನ್ನು ಕೇಳಿ ಅವರ ಮಾರ್ಗವನ್ನನುಸರಿಸಬೇಕಾಗುತ್ತದೆ. ಪ್ರತಿಯೊಬ್ಬ ಋಷಿಯೂ ಕೂಡ ಧರ್ಮಾಧರ್ಮದ ಸಾರವನ್ನು ತಿಳಿದು ಸ್ವತಃ ಧರ್ಮಮಾರ್ಗವನ್ನು ಅನುಸರಿಸಿದವರಾಗಿದ್ದರು. ಯಥಾರ್ಥವಾದಿಗಳು ಸತ್ಯವ್ರತರು ಮಾನ್ಯರೂ ಆಗಿದ್ದವರು.

ಭಾರತ ಋಷಿಗಳಿಗೆ ಬಹು ಪುರಾತನ ಕಾಲದಿಂದಲೂ ಪರಮಪೂಜ್ಯವಾದ ಸ್ಥಾನವನ್ನು ಕೊಟ್ಟಿದೆ ರಾಜಾಧಿರಾಜರು ಸಹ ಋಷಿಗಳಿಗೆ ಅಗ್ರಪೂಜೆ ಮಾಡಿ ಗೌರವಿಸುತ್ತಿದ್ದರು.

1. ಬ್ರಾಹ್ಮಣಗಳಿಗೆ ಸೇರಿದ ಗ್ರಂಥಗಳ ರಚನೆ ಆ ದೇಶದ ಜನರ ರೀತಿನೀತಿಗಳನ್ನು ಬಿಂಬಿಸುವುದಲ್ಲದೆ ಅವರ ನಾಗರಿಕತೆಯ ಮೇಲೆ ಮಹತ್ತರ ಪರಿಣಾಮ ಬೀರುತ್ತದೆ.
2. ಕಾಲಗತಿಯಿಂದ ಪರಕೀಯರ ದಾಳಿಗಳಿಂದ ಅಲ್ಲದೆ ಸ್ತುತಿಪಾಠಕರಿಂದ ಪುರಾತನ ವೇದಸಾಹಿತ್ಯವು ಮೂಲೆಗುಂಪಾಯಿತು.
3. ಮತ್ತೆ ಇಂಗ್ಲೀಷರ ಆಳ್ವಿಕೆಯಿಂದ ಶಾಂತಿ ಸ್ಥಾಪನೆಯಾಗಿದ್ದು ನಿಸ್ವಾರ್ಥ ಯೋಗ್ಯ ಪಂಡಿತವರ್ಗ ಬೆಳೆದು ಅವರಿಗೆ ರಾಜಾಶ್ರಯ ದೊರೆತಿದ್ದರಿಂದ ನಿಧಾನವಾಗಿ ಪಾಶ್ಚಾತ್ಯ ವಿದ್ವಾಂಸರು ತಮ್ಮ ಭಾಷೆಯಲ್ಲಿಯೇ ವೇದಸಾಹಿತ್ಯವನ್ನು ಅಧ್ಯಯನ ಮಾಡಿ ಪ್ರಕಟಿಸಿದರು.
4. ಸಂಸ್ಕೃತದ ಗ್ರಂಥಗಳಲ್ಲಿ ವೇದಗಳಿಗೆ ಅಗ್ರಸ್ಥಾನವು ಉಳಿದ ವಿಷಯಗಳಾದ ವ್ಯಾಕರಣ ಮೀಮಾಂಸಾ, ಸಾಹಿತ್ಯ, ವೇದಾಂತ ಮುಂತಾದ ಎಲ್ಲ ಶಾಸ್ತ್ರಗಳಿಗೂ ವೇದಗಳೇ ತಳಹದಿ.
5. ವೇದಗಳು ನಾಲ್ಕಾಗಿದ್ದರೂ ಋಗ್ವೇದ ಯಜುರ್ವೇದ ಸಾಮವೇದ ಅಥರ್ವಣವೇದ ಒಂದೇ ಗ್ರಂಥದ ನಾಲ್ಕು ಬೇರೆ ಪ್ರಕರಣಗಳೆಂದು ಹೇಳಬಹುದು. ಇವನ್ನು ಋಕ್, ಯಜುಸ್ ಸಾಮನ್, ಅಥರ್ವನ್ ಎಂದು ಕರೆಯುವರು.
6. ವೇದಗಳ ಮಂತ್ರಗಳಿಗೆ ಸ್ವರಾಘಾತಗಳು ಮತ್ತು ಅಷ್ಟವಿಕೃತಿಗಳು ಇರುವುದರಿಂದ ಅವುಗಳ ಮೂಲ ಅಕ್ಷರ ಮಾತ್ರ ಉಚಿತ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆಗೊಳ್ಳಲಿಲ್ಲ.